ತರೀಕೆರೆ ತಾಲ್ಲೂಕು ಬೀರನಹಳ್ಳಿ ಗ್ರಾಮಕ್ಕೆ ಪ್ರಾಥಮಿಕ ಆರೋಗ್ಯ ಘಟಕಕ್ಕೆ ಎಲ್ಲಾ ವ್ಯವಸ್ಥೆಯು ಆಗಿದ್ದು, ಈಗ ಆಸ್ಪತ್ರೆ ಮಂಜೂರಾತಿಗಾಗಿ ತಮ್ಮ ಕಡೆ ಇದೆ. ಈ ಆಸ್ಪತ್ರೆಯನ್ನು ಯಾವಾಗ ಮಂಜೂರಾತಿ ಮಾಡುವಿರಿ ಮತ್ತು ಹಣಸೆಘಟ್ಟ, ಪ್ರಾಥಮಿಕ ಆರೋಗ್ಯ ಘಟಕದ ಹೆರಿಗೆ ವಾರ್ಡಿಗೆ ಹಣ ಮತ್ತು ಎಲ್ಲಾ ವ್ಯವಸ್ಥೆ ಆಗಿದ್ದು ವಾರ್ಡಿಗೆ ಇಬ್ಬರಿಯವರೆವಿಗೂ ಸಹ ಇದರ ಮಂಜೂರಾತಿ ಸಹಾ ದೊರೆತಿಲ್ಲ. ಈ ಎರಡು ಆಸ್ಪತ್ರೆಗಳಿಗೂ ಸಾರ್ವಜನಿಕರು ಎಂತಿಗೆ ಕೊಟ್ಟು, ಸರ್ಕಾರದ ಮಂಜೂರಾತಿಯನ್ನು ಕಾಯುತ್ತಿದ್ದಾರೆ. ಹಾಗೂ ವಿಳಂಬದ ಬಗ್ಗೆ ಜನರಲ್ಲಿ ಬಹಳ ನಿರಾಶೆ ಉಂಟಾಗಿರುತ್ತದೆ. ಈ ನಿರಾಶೆಯನ್ನು ಆದಷ್ಟು ಬೇಗ ನಿವಾರಿಸುತ್ತೀರಾ ಎಂದು ತಿಳಿಯಬಯಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಮಾನ್ಯ ನಿಲೀಕಂಠಪ್ಪನವರು ಕೇಳಿರತಕ್ಕ ಪ್ರಶ್ನೆಗೆ ನಾನು ಇನ್ನೂ ಉತ್ತರವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ನಾಳೆ ಅಥವಾ ನಾಳಿದ್ದು ಈ ಬಗ್ಗೆ ಹೇಳುತ್ತೇನೆ.

೩) ಸುಳ್ಯ ತಾಲ್ಲೂಕಿನ ಕರ್ನಾಟಕ ರಬ್ಬರ್ ತೋಟಗಾರಿಕಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ನೌಕರರ ಬಗ್ಗೆ.

ಶ್ರೀ ಕೆ. ಕುಶಾಲ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಕರ್ನಾಟಕ ರಬ್ಬರ್ ತೋಟಗಾರಿಕಾ ಸಂಸ್ಥೆಯ ಸುಮಾರು ಲಕ್ಷಗಟ್ಟಲೆ ಎಕರೆ ರಬ್ಬರು ತೋಟವಿರುವುದು. ಇಲ್ಲಿ ೭-೮ ಸಾವಿರ ಕಾರ್ಮಿಕರು ರಬ್ಬರಿನ ಹಾಲು ತೆಗೆಯುವ ಕೆಲಸ ಮಾಡಿಕೊಂಡು ಬರುತ್ತಿರುವರು. ಈ ರಬ್ಬರು ಕಾರ್ಮಿಕರ ಕುಟುಂಬದಲ್ಲಿ ಒಬ್ಬ, ಇಬ್ಬರಿಗೆ ಮಾತ್ರ ಕೆಲಸ ಕೊಟ್ಟಿರುವರು. ಉಳಿದ ಕೆಲಸವನ್ನು ಇತರರಿಗೆ ಕೊಟ್ಟಿರುವವರು. ರಬ್ಬರು ಕಾರ್ಮಿಕ ಕುಟುಂಬದಲ್ಲಿ ಒಬ್ಬರಿಬ್ಬರಿಗೆ ಮಾತ್ರ ಉದ್ಯೋಗ ಕೊಟ್ಟಿರುವುದು ಸರಿಯಲ್ಲ. ಹೆಚ್ಚಿನವರಿಗೆ ಉದ್ಯೋಗ ಕಲ್ಪಿಸಬೇಕು. ನಾವು ಅದೇ ಕಸುಬಿನವರಾಗಿದ್ದು, ನಿರಾಶ್ರಿತ ಸಿಲೋನಿನಿಂದ ಇಲ್ಲಿಗೆ ವಲಸೆ ಬಂದವರಿದ್ದೇವೆ. ಕುಟುಂಬದಲ್ಲಿ ಜೀವನಕ್ಕೆ ತೊಂದರೆಯಾಗಿದೆ, ಹೊರಗಿನವರಿಗೆ ರಬ್ಬರ್ ಹಾಲು ತೆಗೆಯುವ ಕೆಲಸವನ್ನು ಕೊಡದೆ ನಮಗೇ ಕೊಡಬೇಕು ಮತ್ತು ಮಜೂರಿ ಹಾಗೂ ಬೋನಸ್ ಹೆಚ್ಚಿಸಬೇಕು ಎಂದು ಕಳೆದ ೨-೩ ತಿಂಗಳುಗಳ ಹಿಂದಿನಿಂದಲೇ ಮುಷ್ಕರ ಹೂಡುತ್ತಿರುವರು. ಈ ಕಾರ್ಮಿಕರ ಮುಷ್ಕರದ ಬಗ್ಗೆ ತೋಟಗಾರಿಕಾ ಸಂಸ್ಥೆಯಾಗಲೀ, ಸರ್ಕಾರವಾಗಲೀ ಯಾವುದೇ ಕ್ರಮ ಕೈಗೊಳ್ಳದ್ದು ತೀರಾ ಅನ್ಯಾಯವಾಗಿರುವುದು. ಮುಷ್ಕರದ ಬಗ್ಗೆ ಸರಕಾರವಾಗಲೀ, ತೋಟಗಾರಿಕಾ ಸಂಸ್ಥೆಯಾಗಲೀ ಯಾವುದೇ ಮಧ್ಯಸ್ಥಿಕೆ ವಹಿಸದೆ ಈ ಎರಡು ತಿಂಗಳುಗಳ ಮುಷ್ಕರದಿಂದ ದಿನವೊಂದಕ್ಕೆ ಈ ತೋಟಗಾರಿಕೆಯಲ್ಲಿ ರೂಪಾಯಿ ೮೦,೦೦೦ ನಷ್ಟ ಸಂಭವಿಸಿರುತ್ತದೆ. ದಿನವೊಂದಕ್ಕೆ ೮೦,೦೦೦ ದಂತೆ ೨ ತಿಂಗಳ ನಷ್ಟ ಎಷ್ಟಾಯಿತು ? ಈ ಕುರಿತು ಇಲಾಖೆಯಾಗಲೀ, ಸರ್ಕಾರವಾಗಲೀ ಏನೊಂದು ಕ್ರಮ ಕೈಗೊಳ್ಳದೆ ಇರುವುದರಿಂದ ಈ ಎಲ್ಲಾ ನಷ್ಟಕ್ಕೆ ಯಾರು ಹೊಣೆ ? ಸರ್ಕಾರ ಈಗಲಾದರೂ ಸರಿಯಾದ ರೀತಿಯಿಂದ ಏನು ಕ್ರಮ ಕೈಗೊಂಡಿದೆ ? ಇದು ಯಾವ ಹಂತದಲ್ಲಿರುವುದು ಎಂದು ತಿಳಿಯಲು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಪಿ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಾಳೆ ಇದರ ಬಗ್ಗೆ ಉತ್ತರ ಕೊಡಲು ಕಾರ್ಮಿಕ ಮಂತ್ರಿಗಳು ಹೇಳುತ್ತೇನೆ.

ಶ್ರೀ ಮಲ್ಲನಗೌಡ ಬಿರಾದರ್
ಶ್ರೀ ಡಿ. ಟಿ.ಜಯಕುಮಾರ್
ಶ್ರೀ ವಸಂತ ಬಿ ಸಾಲಿಯಾನ } ಸದಸ್ಯರು ಗೈರುಹಾಜರಿ.